ಪಿ.ಡಬ್ಲ್ಯೂ-01

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಮಿಸ್.ನಂಃ 87/2026**

**ಸಾಕ್ಷಿಯನ್ನು ದಿನಾಂಕಃ 07.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಸ್.ಬಿ.ಎಸ್. ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ **3 ನೇ ಅರ್ಜಿದಾರನಾಗಿರುತ್ತೇನೆ.** ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

ತಹಶೀಲ್ದಾರ್ ರವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-1** ಎಂದು, ಗ್ರಾಮ ಆಡಳಿತ ಅಧಿಕಾರಿ ಹಾಗು ರಾಜಸ್ವ ನಿರೀಕ್ಷಕರು ನೀಡಿದ ವರದಿ ಹಾಗು ಜರುಗಿಸಿದ ಮಹಜರ್ ನ ಧೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.-2** ಮತ್ತು **ನಿ.ಪಿ.-3** ಎಂದು, ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-4** ಎಂದು, ದಿನಾಂಕಃ 17.02.2026 **ರ ಪ್ರಜಾನುಡಿ** ಮತ್ತು **ಹಲೋ ಮೈಸೂರು** ದಿನಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.-5 ಮತ್ತು ನಿ.ಪಿ.-6** ಎಂದು, ಪತ್ರಿಕಾ ಪ್ರಕಟಣೆಗಳನ್ನು ಕ್ರಮವಾಗಿ **ನಿ.ಪಿ.-5(ಎ) ಮತ್ತು ನಿ.ಪಿ.-6(ಎ)** ಎಂದು, 04 ಆಧಾರ್ ಕಾರ್ಡ್ ಗಳ ನೋಟರಿ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.-7 ರಿಂದ ನಿ.ಪಿ.-10** ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಗಮನಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರು ಏಕಪಕ್ಷೀಯವಾಗಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಲಾಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**